

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–10–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಸ್ವರ್ಗದ ಸುವಾರ್ತೆಯನ್ನು ನೀಡಿದ್ದ ಹತ್ತು ವ್ಯಕ್ತಿಗಳಲ್ಲಿ ಹಝ್ರತ್ ಉಮರ್(ರ) ಅಲ್ಲದೆ ಹಝ್ರತ್ ಅಬೂಬಕರ್, ಉಸ್ಮಾನ್, ಅಲಿ, ತಲ್‌ಹ, ಝುಬೇರ್, ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್, ಸಈದ್ ಬಿನ್ ಝೈದ್, ಅಬೂಉಬೈದ ಬಿನ್ ಜರಾಹ್ ಸೇರುತ್ತಾರೆ.

ಹಝ್ರತ್ ಅಬೂಮೂಸಾ(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರೊಂದಿಗೆ ಮದೀನದ ಒಂದು ತೋಟದಲ್ಲಿದ್ದೆ. ಅಲ್ಲಿಗೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಬಂದರು. ನಾನು ಅವರಿಗೆ ಹಝ್ರತ್ ಪೈಗಂಬರ್(ಸ)ರ ನಿರ್ದೇಶನದ ಪ್ರಕಾರ ಸ್ವರ್ಗದ ಸುವಾರ್ತೆಯನ್ನು ನೀಡಿದೆನು. ಆಗ ಅವರು ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಆದರೆ ಹಝ್ರತ್ ಉಸ್ಮಾನ್(ರ) ಬಂದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರಿಗೆ ಒಂದು ವಿಪತ್ತು ಬಂದೆರಗುವುದಾದರೂ ಅವರಿಗೂ ಸ್ವರ್ಗದ ಸುವಾರ್ತೆಯನ್ನು ನೀಡು. ಹಝ್ರತ್ ಉಸ್ಮಾನ್(ರ) ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಅನಂತರ ಹೀಗೆ ಹೇಳಿದರು: ವಿಪತ್ತಿನಿಂದ ರಕ್ಷಣೆ ಪಡೆಯಲು ಅಲ್ಲಾಹನಿಂದಲೇ ನಾನು ಸಹಾಯವನ್ನು ಬೇಡುತ್ತೇನೆ.

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಒಂದು ಬಾರಿ ನಾನು ನಿದ್ದೆ ಹೋಗಿದ್ದಾಗ ಕನಸಿನಲ್ಲಿ ನಾನು ನನ್ನನ್ನು ಸ್ವತಃ ಸ್ವರ್ಗದಲ್ಲಿ ಒಂದು ಅರಮನೆಯ ಸಮೀಪ ಕಂಡೆನು. ಆ ಅರಮನೆ ಯಾರದೆಂದು ಕೇಳಿದಾಗ ಅದು ಉಮರ್ ಬಿನ್ ಖತ್ತಾಬ್‌ರದ್ದಾಗಿದೆ ಎಂದು ಗೊತ್ತಾಯಿತು. ಉಮರರ ಅಭಿಮಾನಕ್ಕೆ ಕುಂದುಂಟಾಗದಿರಲಿ ಎಂಬ ಚಿಂತೆಯಿಂದ ನಾನು ಮರಳಿಬಂದೆ. ಈ ಕನಸನ್ನು ಆಲಿಸಿ ಅಲ್ಲಿ ಕುಳಿತಿದ್ದ ಹಝ್ರತ್ ಉಮರ್(ರ) ಅತ್ತುಬಿಟ್ಟು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮಿಂದ ನನ್ನ ಅಭಿಮಾನಕ್ಕೆ ಕುಂದುಂಟಾಗುವುದೇ? ನೀವು ಏಕೆ ಮರಳಿ ಹೋದಿರಿ? ನೀವು ಅನುಗ್ರಹಿಸಬೇಕಾಗಿತ್ತು.

ಹಝ್ರತ್ ಅಬೂಸಈದ್ ಖುದ್‌ರಿ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅತ್ಯಂತ ಮೇಲಿನ ಪದವಿಯ ಸ್ವರ್ಗವಾಸಿಗಳಲ್ಲಿ ಯಾರಾದರೊಬ್ಬರು ಸಾಮಾನ್ಯ ಸ್ವರ್ಗವಾಸಿಗಳು ಇರುವ ಸ್ಥಳವನ್ನು ಇಣುಕಿ ನೋಡಿದರೆ, ಅವರ ಮುಖದ ಕಾರಣದಿಂದ ಸ್ವರ್ಗದ ಆ ಪ್ರದೇಶವು ಹೊಳೆಯುವುದು. ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಸಹ ಅವರಲ್ಲಿ ಸೇರಿದವರಾಗಿರುವರು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಬೂಬಕರ್ ಮತ್ತು ಉಮರ್, ಪ್ರವಾದಿಗಳನ್ನು ಹೊರತುಪಡಿಸಿ ಆರಂಭ ಮತ್ತು ಕೊನೆಯ ಎಲ್ಲ ಹಿರಿ ವಯಸ್ಸಿನ ಜನರ ನೇತಾರರಾಗಿರುವರು. ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಉಮರ್ ಬಿನ್ ಖತ್ತಾಬ್ ಸ್ವರ್ಗವಾಸಿಗಳ ದೀಪವಾಗಿರುವರು. ಹಝ್ರತ್ ಉಖ್‌ಬ ಬಿನ್ ಆಮಿರ್ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ನಂತರ ಯಾರಾದರೂ ನಬಿಯಾಗಿರುತ್ತಿದ್ದರೆ ಉಮರ್ ಬಿನ್ ಖತ್ತಾಬ್ ಆಗುತ್ತಿದ್ದರು.

ಹಝ್ರತ್ ಅಬೂ ಹುರೈರ(ರ) ಮತ್ತು ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ನನ್ನ ಉಮ್ಮತಿನಲ್ಲಿ ಯಾರಾದರೂ ಮುಹದ್ದಸ್ ಇರುವುದಾದರೆ, ಅವರು ಉಮರ್ ಬಿನ್ ಖತ್ತಾಬ್ ಆಗಿರುವರು.

ಬಹಳ ಹೆಚ್ಚಾಗಿ ದಿವ್ಯವಾಣಿಗಳು ಮತ್ತು ದಿವ್ಯದರ್ಶನಗಳು ಲಭಿಸುವ ವ್ಯಕ್ತಿಯನ್ನು ಮುಹದ್ದಸ್ ಎಂದು ಕರೆಯಲಾಗುತ್ತದೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮಗಿಂತ ಮುಂಚೆ ಆಗಿ ಹೋದ ಬನೀ ಇಸ್ರಾಈಲ್ ಸಮುದಾಯದಲ್ಲಿ ಅಲ್ಲಾಹನೊಡನೆ ಸಂಭಾಷಣೆ ನಡೆಸುತ್ತಿದ್ದ ಪ್ರವಾದಿಗಳಲ್ಲದ ಜನರೂ ಇದ್ದರು. ನನ್ನ ಸಮುದಾಯದಲ್ಲಿ ಅಂತಹ ವ್ಯಕ್ತಿ ಯಾರಾದರೂ ಇರುವುದಾದರೆ ಅವರು ಉಮರ್ ಆಗಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಯಾವಾಗಲೂ ಉಪಮೆಗಳನ್ನು ನೀಡುತ್ತಾನೆ. ಸ್ವಭಾವ, ವೈಶಿಷ್ಟ್ಯ, ಗುಣ ಮತ್ತು ಯೋಗ್ಯತೆಯ ದೃಷ್ಟಿಯಲ್ಲಿ ಒಬ್ಬರ ಹೆಸರನ್ನು ಇನ್ನೊಬ್ಬರಿಗೆ ನೀಡುತ್ತಾನೆ. ಒಂದು ಹದೀಸಿನ ಪ್ರಕಾರ ಯಾರ ಆಧ್ಯಾತ್ಮಿಕ ಸ್ಥಿತಿಯು ಉಮರರ ಆಧ್ಯಾತ್ಮಿಕ ಸ್ಥಿತಿಗೆ ಸಮಾನವಾಗಿರುವುದೋ ಅವನು ಆವಶ್ಯಕವಾದ ಸಮಯದಲ್ಲಿ ಮುಹದ್ದಸ್ ಆಗುವನು. **"ಅಂತ ಮುಹದ್ದಸುಲ್ಲಾಹ್ ಫೀಕ ಮಾದತುನ್ ಫಾರೂಖಿಯ"** ಎಂದು ನನಗೂ ಒಂದು ಬಾರಿ ದಿವ್ಯವಾಣಿ ಲಭಿಸಿತ್ತು. ಎಂದರೆ, ನೀನು ಮುಹದ್ದಸುಲ್ಲಾಹ್ ಆಗಿರುವಿ. ನಿನ್ನಲ್ಲಿ ಉಮರ್ ಫಾರೂಖರ ಗುಣವಿದೆ.

ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಯಮಾಮ ಯುದ್ಧದಲ್ಲಿ ಪವಿತ್ರ ಖುರ್‌ಆನಿನ ಎಪ್ಪತ್ತು ಹಾಫಿಝ್‌ಗಳು ಶಹೀದರಾದಾಗ ಹಝ್ರತ್ ಉಮರ್(ರ) ಪವಿತ್ರ ಖುರ್‌ಆನಿನ ಸಂರಕ್ಷಣೆ ಮತ್ತು ಸಂಕಲನ ಮಾಡುವುದರ ಕುರಿತು ಸಲಹೆ ನೀಡಿದ್ದರು. ಹೀಗೆ ಹಝ್ರತ್ ಝೈದ್ ಬಿನ್ ಸಾಬಿತ್(ರ) ಪವಿತ್ರ ಖುರ್‌ಆನಿನ ಸಂಕಲನದ ಕೆಲಸವನ್ನು ಶುರುಮಾಡಿದರು.

ಪವಿತ್ರ ಖುರ್‌ಆನನ್ನು ಹಝ್ರತ್ ಉಮರ್(ರ) ಕಂಠಪಾಠ ಮಾಡಿರುವುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಬೂಉಬೈದ ಹೀಗೆ ವರದಿ ಮಾಡಿರುವರು: ಮುಹಾಜಿರ್ ಸಹಾಬರಲ್ಲಿ ಅಬೂಬಕರ್, ಉಮರ್, ಉಸ್ಮಾನ್, ಅಲಿ, ತಲ್‌ಹ, ಸಅದ್, ಇಬ್ನು ಮಸ್‌ಊದ್, ಹುದೈಫ, ಸಾಲಿಂ, ಅಬೂಹುರೈರ, ಅಬ್ದುಲ್ಲಾಹ್ ಬಿನ್ ಸಾಇಬ್, ಅಬ್ದುಲ್ಲಾಹ್ ಬಿನ್ ಉಮರ್ ಮತ್ತು ಅಬ್ದುಲ್ಲಾಹ್ ಬಿನ್ ಅಬ್ಬಾಸ್ ಪವಿತ್ರ ಖುರ್‌ಆನ್ ಹಾಫಿಝ್‌ಗಳಾಗಿದ್ದರು ಎಂದು ಸಾಬೀತಾಗುತ್ತದೆ.

ಹಝ್ರತ್ ಪೈಗಂಬರ್(ಸ)ರಿಗೆ ಕೆಲವು ದಿವ್ಯವಾಣಿಗಳು ಹಝ್ರತ್ ಉಮರ್(ರ)ರ ಅಭಿಪ್ರಾಯಕ್ಕೆ ಅನುಗುಣವಾಗಿ ಅವತೀರ್ಣವಾಗಿದ್ದುವು.

ಸಿಹಾಹ್ ಸಿತ್ತ ಹದೀಸುಗಳಿಂದ (ಎಂದರೆ, ಪ್ರಬಲವಾದ ಆರು ಹದೀಸ್ ಗ್ರಂಥಗಳು) ಇಂತಹ ಮೂರು ಸಂದರ್ಭಗಳ ಬಗ್ಗೆ ಪ್ರಸ್ತಾಪಗಳು ಬಂದಿವೆ. ಸಿಹಾಹ್ ಸಿತ್ತ ಹದೀಸುಗಳ ವರದಿಗಳನ್ನು ಒಟ್ಟಾಗಿ ನೋಡುವುದಾದರೆ, ಅದರ ಸಂಖ್ಯೆ ಏಳು ಆಗುತ್ತವೆ. ಸಹೀಹ್ ಬುಖಾರಿಯಲ್ಲಿ ಹಝ್ರತ್ ಉಮರ್(ರ)ರಿಂದ ಹೀಗೆ ವರದಿಯಾಗಿದೆ; ಮೂರು ಸಂಗತಿಗಳಲ್ಲಿ ನನ್ನ ಅಭಿಪ್ರಾಯವು ನನ್ನ ಪ್ರಭುವಿನ ಇಷ್ಟ ಪ್ರಕಾರವಾಗಿದ್ದುವು. ನಾನು ಒಂದು ಸಲ ಹೇಳಿದೆ: ಯಾ ರಸೂಲಲ್ಲಾಹ್, ನಾವು ಮಖಾಮೆ ಇಬ್ರಾಹೀಮನ್ನು ನಮಾಝಿನ ಜಾಗವನ್ನಾಗಿ ಮಾಡೋಣ. ಆಗ **ವತ್ತಖಿದೂ ಮಖಾಮಿ ಇಬ್ರಾಹೀಮ ಮುಸಲ್ಲ** ಎಂಬ ವಚನ ಅವತೀರ್ಣವಾಯಿತು. ಒಂದು ಬಾರಿ ನಾನು ಹೀಗೆ ಹೇಳಿದ್ದೆ: ಯಾ ರಸೂಲಲ್ಲಾಹ್, ತಾವು ತಮ್ಮ ಪತ್ನಿಯರೊಡನೆ ಪರ್ದಾ ಧರಿಸಲು ಆಜ್ಞಾಪಿಸಿರಿ. ಏಕೆಂದರೆ, ಅವರೊಡನೆ ಒಳ್ಳೆಯವರೂ ಕೆಟ್ಟವರೂ ಮಾತನಾಡುತ್ತಿರುತ್ತಾರೆ. ಅದರಂತೆಯೇ ಪರದಾಧಾರಣೆಯ ಆಜ್ಞೆ ಅವತೀರ್ಣವಾಯಿತು. ಒಂದು ಬಾರಿ ಹಝ್ರತ್ ಪೈಗಂಬರ್(ಸ)ರ ಪತ್ನಿಯಂದಿರು ಅಭಿಮಾನದಿಂದ ಹಝ್ರತ್ ಪೈಗಂಬರ್(ಸ)ರ ಕುರಿತು ಒಟ್ಟುಗೂಡಿದರು. ಅವರಲ್ಲಿ ಹಝ್ರತ್ ಉಮರರ(ರ) ಪುತ್ರಿ ಕೂಡ ಇದ್ದರು. ನಾನು ಅವರ ಪತ್ನಿಯಂದಿರೊಡನೆ ಹೇಳಿದೆ: ಹಝ್ರತ್ ಪೈಗಂಬರ್(ಸ) ನಿಮಗೆ ತಲಾಖ್ ನೀಡಿದರೆ, ಅವರ ಪ್ರಭು ಅವರಿಗೆ ನಿಮಗಿಂತ ಉತ್ತಮ ಪತ್ನಿಯರನ್ನು ನಿಮ್ಮ ಬದಲಾಗಿ ನೀಡುವನು ಎಂದು ನನಗೆ ಭರವಸೆಯಿದೆ. ಆಗ ಈ ವಚನ ಅವತೀರ್ಣವಾಯಿತು: **ಅಸಾ ರಬ್ಬುಹೂ ಇನ್ ತಲ್ಲಖಕುನ್ನ ಅನ್‌ಯುಬ್‌ದಿಲಹೂ ಅಝ್‌ವಾಜನ್ ಖೈರನ್ ಮಿನ್‌ಕುನ್ನ**. ಎಂದರೆ, ಹಝ್ರತ್ ಪೈಗಂಬರ್(ಸ) ನಿಮಗೆ ತಲಾಖ್ ನೀಡಿದರೆ, ಅವರ ಪ್ರಭು ಅವರಿಗೆ ನಿಮಗಿಂತ ಉತ್ತಮ ಪತ್ನಿಯರನ್ನು ನೀಡುವನು.

ಮುನಾಫಿಕರ ಜನಾಝ ನಿರ್ವಹಿಸದಿರಲು ಹಝ್ರತ್ ಉಮರ್(ರ) ಹೇಳಿರುವುದಕ್ಕೆ ಸರಿಸಮಾನವಾಗಿ ಪವಿತ್ರ ಖುರ್‌ಆನ್ ವಚನ ಅವತೀರ್ಣವಾಗಿರುವುದರ ಬಗ್ಗೆ ಸಹೀಹ್ ಮುಸ್ಲಿಮ್‌ನಲ್ಲಿ ಪ್ರಸ್ತಾಪ ಸಿಗುತ್ತದೆ. ಮದ್ಯಪಾನ ನಿಷೇಧಿಸಲಾದ ಬಗ್ಗೆ ಹಝ್ರತ್ ಉಮರ್(ರ)ರ ಇಚ್ಛೆಗೆ ಅನುರೂಪವಾಗಿ ಪವಿತ್ರ ಖುರ್‌ಆನಿನ ವಚನ ಅವತೀರ್ಣಗೊಂಡದ್ದರ ಬಗೆಗಿನ ಪ್ರಸ್ತಾಪ ಸುನನ್ ತಿರ್ಮಿಧಿಯಲ್ಲಿ ಬರುತ್ತದೆ.

ಸಿಹಾಹ್ ಸಿತ್ತದಲ್ಲಿ ಪ್ರಸ್ತಾಪಿಸಲಾಗಿರುವ ಈ ಅನುರೂಪತೆಗಳಲ್ಲದೆಯೂ ಚರಿತ್ರೆಗಾರರು ಪವಿತ್ರ ಖುರ್‌ಆನ್ ವಚನಗಳು ಮತ್ತು ಹಝ್ರತ್ ಉಮರರ ಅನಿಸಿಕೆಗಳ ನಡುವೆ ಇರುವ ಅನೇಕ ಸರಿಸಮಾನತೆಗಳ ಬಗ್ಗೆ ಪ್ರಸ್ತಾಪಿಸಿರುವರು. ಅಲ್ಲಾಮ ಸುಯೂತಿ ಇಪ್ಪತ್ತರಷ್ಟು ಸರಿಸಮಾನತೆಗಳ ಬಗ್ಗೆ ಪ್ರಸ್ತಾಪಿಸಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಹಾಬರ ಎಡೆಯಲ್ಲಿ ಹಝ್ರತ್ ಉಮರ್(ರ)ರ ಸ್ಥಾನ ಎಷ್ಟು ಉನ್ನತವಾಗಿತ್ತು ಎಂದರೆ, ಕೆಲವೊಮ್ಮೆ ಅವರ ಅಭಿಪ್ರಾಯಗಳಿಗೆ ಅನುರೂಪವಾಗಿ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣಗೊಳ್ಳುತ್ತಿದ್ದುವು. ಶೈತಾನನು ಹಝ್ರತ್ ಉಮರ್(ರ)ರ ನೆರಳಿಗೆ ಕೂಡ ಹೆದರಿ ಪರಾರಿಯಾಗುತ್ತಾನೆ ಎಂದು ಅವರ ಕುರಿತು ಹದೀಸ್ ಇದೆ. ಅದೇ ರೀತಿಯಲ್ಲಿ ನನ್ನ ನಂತರ ಯಾರಾದರೂ ನಬಿಯಿರುತ್ತಿದ್ದರೆ, ಉಮರ್ ಆಗುತ್ತಿದ್ದರು ಎಂದೂ ಹದೀಸಿದೆ. ಮೂರನೆಯದಾಗಿ, ಹಿಂದಿನ ಸಮುದಾಯಗಳಲ್ಲಿ ಮುಹದ್ದಸ್ ಇರುತ್ತಿದ್ದರು. ನನ್ನ ಸಮುದಾಯದಲ್ಲಿ ಯಾರಾದರೂ ಮುಹದ್ದಸ್ ಇದ್ದರೆ, ಉಮರ್ ಆಗಿರುವರು ಎಂದೂ ಹದೀಸಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಬ್ಬ ಸಹಾಬಿಯಾಗಿದ್ದ ಅಬ್ದುಲ್ಲಾಹ್ ಬಿನ್ ಝೈದ್‌ರಿಗೆ ಅಲ್ಲಾಹನು ದಿವ್ಯವಾಣಿ ಮೂಲಕ ಅಧಾನ್ ಕಲಿಸಿದನು. ಹಝ್ರತ್ ಉಮರ್(ರ) ಹೇಳುತ್ತಾರೆ: ನನಗೂ ಅಲ್ಲಾಹನು ಇದೇ ಅಧಾನನ್ನು ಕಲಿಸಿದ್ದನು. ಆದರೆ ಬೇರೊಬ್ಬ ವ್ಯಕ್ತಿ ಈ ಸಂಗತಿಯನ್ನು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿರುವರು ಎಂಬ ಕಾರಣದಿಂದ ಇಪ್ಪತ್ತು ದಿವಸಗಳಷ್ಟು ಕಾಲ ನಾನು ಸುಮ್ಮನಿದ್ದೆ. ಸುನನ್ ತಿರ್ಮಿಧಿಯ ಒಂದು ವರದಿಯಿದೆ. ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರಿಗೆ ಈ ಕನಸನ್ನು ಹೇಳಿಕೊಟ್ಟಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಈಗ ಈ ಸಂಗತಿ ಹೆಚ್ಚು ಪ್ರಬಲಗೊಂಡಿದೆ. ಈಗ ಇದು ಹೆಚ್ಚು ದೃಢೀಕರಿಸಲ್ಪಟ್ಟಿದೆ.

ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರನ್ನು ಎಷ್ಟು ಗೌರವಾದರದಿಂದ ಕಾಣುತ್ತಿದ್ದರು ಎಂಬುದರ ಕುರಿತು ಹಝ್ರತ್ ಇಬ್ನು ಉಮರ್‌ರಿಂದ ಒಂದು ವರದಿಯಿದೆ. ಹಝ್ರತ್ ಇಬ್ನು ಉಮರ್(ರ) ಹಝ್ರತ್ ಪೈಗಂಬರ್(ಸ)ರೊಂದಿಗೆ ಒಂದು ಯಾತ್ರೆಯಲ್ಲಿದ್ದರು. ಅವರು ಹಝ್ರತ್ ಉಮರ್(ರ)ರ ಒಂದು ಒಂಟೆಯ ಮೇಲೆ ಸವಾರರಾಗಿದ್ದರು. ಅದು ವೇಗವಾಗಿ ಹೋಗುತ್ತಿತ್ತು. ಅದು ಹಝ್ರತ್ ಪೈಗಂಬರ್(ಸ)ರ ಒಂಟೆಗಿಂತ ಮುಂದೆ ಸಾಗುತ್ತಿತ್ತು. ಆಗ ಅವರ ತಂದೆ ಉಮರ್(ರ) ಅವರೊಡನೆ ಹೀಗೆ ಹೇಳುತ್ತಿದ್ದರು: ಅಬ್ದುಲ್ಲಾಹ್, ಹಝ್ರತ್ ಪೈಗಂಬರ್(ಸ)ಗಿಂತ ಮುಂದಾಗಿ ಯಾರೂ ಹೋಗಬಾರದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಂದು ಬಾರಿ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ಮನೆಗೆ ಹೋದರು. ಹಝ್ರತ್ ಪೈಗಂಬರ್(ಸ) ಚಾಪೆಯಲ್ಲಿ ಮಲಗಿದ್ದ ಕಾರಣದಿಂದ ಚಾಪೆಯ ಗುರುತುಗಳು ಅವರ ಬೆನ್ನಲ್ಲಿ ಮೂಡಿದ್ದವು. ಹಝ್ರತ್ ಉಮರ್(ರ) ಹೇಳಿದರು: ರೋಮ್ ಮತ್ತು ಇರಾನಿನ ಅರಸರು ಆರಾಮದಾಯಕ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ನೀವು ಈ ಕಷ್ಟತೆಯಲ್ಲಿದ್ದೀರಿ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಈ ಲೌಕಿಕವಾದ ವಸ್ತುಗಳಿಂದ ಏನು ಮಾಡಲಿ? ನನ್ನ ಉದಾಹರಣೆಯು ಒಬ್ಬ ಸವಾರನು ತನ್ನ ಒಂಟೆಯ ಮೇಲೆ ಸವಾರನಾಗಿ ಕಠಿಣವಾದ ಬೇಸಿಗೆ ಕಾಲದಲ್ಲಿ ಹೋಗುವವನಂತಾಗಿದೆ. ಮಧ್ಯಾಹ್ನದ ಕಠಿಣ ಬಿಸಿಲನ್ನು ಸಹಿಸಲು ಸಾಧ್ಯವಾಗದೇ ಬಂದಾಗ, ವಿಶ್ರಾಂತಿ ಪಡೆಯಲು ಅವನು ಒಂದು ಮರದ ನೆರಳಿನಲ್ಲಿ ತಂಗುತ್ತಾನೆ. ಅನಂತರ ಕೆಲವು ನಿಮಿಷಗಳ ನಂತರ ಅದೇ ಬಿಸಿಲಲ್ಲಿ ಮುಂದಕ್ಕೆ ಸಾಗುತ್ತಾನೆ. ಇದಾಗಿದೆ ನನ್ನ ಉದಾಹರಣೆ.

ಒಂದು ಬಾರಿ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಉಮ್ರ ಮಾಡಲಿಕ್ಕಾಗಿ ಅನುಮತಿ ಕೇಳಿದಾಗ ಅವರು ಅನುಮತಿ ಕೊಟ್ಟರು ಮತ್ತು ಹೀಗೆ ಹೇಳಿದರು: ಹೇ ನನ್ನ ಸಹೋದರ, ನಮ್ಮನ್ನು ನಿನ್ನ ದುಆಗಳಲ್ಲಿ ಮರೆಯಬೇಡ. ಹಝ್ರತ್ ಉಮರ್(ರ) ಹೇಳುತ್ತಾರೆ: ಇದು ಎಂತಹ ಮಾತಾಗಿದೆ ಎಂದರೆ, ಇದರ ಬದಲಾಗಿ ನನಗೆ ಲೋಕ ಪೂರ್ತಿ ಲಭಿಸಿದರೂ ನನಗೆ ಈ ಮಾತಿನಿಂದ ಲಭಿಸಿದಷ್ಟು ಸಂತೋಷ ಲಭಿಸಲಿಕ್ಕೆ ಸಾಧ್ಯವಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ನಿಧನರಾದಾಗ ಹಝ್ರತ್ ಪೈಗಂಬರ್(ಸ) ಜೀವಂತವಾಗಿರುವರು ಮತ್ತು ಅವರು ಮರಳಿ ಬರುವರು ಎಂದು ಹಝ್ರತ್ ಉಮರ್(ರ)ರಿಗೆ ಅನಿಸುತ್ತಿತ್ತು. ಅದಕ್ಕೆ ವಿರುದ್ಧವಾಗಿ ಹೇಳುವವನ ತಲೆಯನ್ನು ಕಡಿಯಲು ಅವರು ತಯಾರಾಗಿ ನಿಂತಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಎಲ್ಲ ಸಹಾಬರ ಮುಂದೆ **"ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್ ಖಬ್‌ಲಿಹಿರ್ರುಸುಲ್"** ಎಂಬ ಪವಿತ್ರ ಖುರ್‌ಆನಿನ ವಚನವನ್ನು ಓದಿದಾಗ ಹಝ್ರತ್ ಉಮರ್(ರ) ಹೇಳುತ್ತಾರೆ: ನನ್ನ ಕಾಲುಗಳು

ನಡುಗಿದುವು, ನಾನು ದುಃಖದಿಂದ ನೆಲಕ್ಕೆ ಬಿದ್ದೆನು. ಪ್ರವಾದಿಗಳಲ್ಲಿ ಯಾರಾದರೂ ಆ ಸಮಯದಲ್ಲಿ ಜೀವಂತವಾಗಿ ಇರುತ್ತಿದ್ದರೆ, ಈ ಪುರಾವೆ ಸರಿಯಾಗುತ್ತಿರಲಿಲ್ಲ. 'ಹಝ್ರತ್ ಈಸಾ ಮಸೀಹ್ ಈಗ ಜೀವಂತವಾಗಿ ಆಕಾಶದಲ್ಲಿ ಇರುವರು, ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಜೀವಂತವಾಗಿರಲು ಏಕೆ ಸಾಧ್ಯವಿಲ್ಲ' ಎಂದು ಹಝ್ರತ್ ಉಮರ್(ರ) ಕೇಳುತ್ತಿದ್ದರು. ಆದರೆ ಎಲ್ಲ ಸಹಾಬರು ಆಗ ಮೌನವಾಗಿದ್ದ ಕಾರಣದಿಂದ ಹಝ್ರತ್ ಈಸಾ ಮಸೀಹರು ಮೃತಪಟ್ಟಿದ್ದಾರೆ ಎಂದು ಇದರಿಂದ ಸಾಬೀತಾಗುತ್ತದೆ.

ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರನ್ನು ಸಂಪೂರ್ಣವಾಗಿ ಅನುಸರಿಸುತ್ತಿದ್ದರು. ಹಜರುಲ್ ಅಸ್‌ವದನ್ನು ನೋಡಿ ಅವರು ಹೀಗೆ ಹೇಳುತ್ತಿದ್ದರು: ಹಝ್ರತ್ ಪೈಗಂಬರ್(ಸ) ನಿನ್ನನ್ನು ಚುಂಬಿಸಿದ್ದಾಗಿ ನಾನು ನೋಡಿರದಿದ್ದರೆ, ನಿನ್ನನ್ನು ನಾನು ಖಂಡಿತ ಚುಂಬಿಸುತ್ತಿರಲಿಲ್ಲ.

ಹಝ್ರತ್ ಪೈಗಂಬರ್(ಸ) ಜನರ ಕೈದಿಗಳನ್ನು ಸ್ವತಂತ್ರಗೊಳಿಸಿದಾಗ ಹಝ್ರತ್ ಉಮರ್(ರ) ಸಹ ಕೈದಿಯಾಗಿದ್ದ ಹುಡುಗಿಯೊಬ್ಬಳನ್ನು ತಕ್ಷಣವೇ ಸ್ವತಂತ್ರ ಗೊಳಿಸಿದರು.

ಕಪಟವಿಶ್ವಾಸಿಗಳ ಒಂದು ಸಂಘದ ಹೆಸರನ್ನು ಪ್ರಸ್ತಾಪಿಸುತ್ತಾ ಹಝ್ರತ್ ಪೈಗಂಬರ್(ಸ) ಹಝ್ರತ್ ಹುಧೈಫ(ರ)ರೊಡನೆ ಹೇಳಿದರು: ಈ ವ್ಯಕ್ತಿಗಳ ಜನಾಝ ನಮಾಝನ್ನು ನಿರ್ವಹಿಸುವುದರಿಂದ ಅಲ್ಲಾಹನು ನನ್ನನ್ನು ತಡೆದಿದ್ದಾನೆ. ಹೀಗೆ ಹಝ್ರತ್ ಉಮರ್(ರ) ತನ್ನ ಖಿಲಾಫತ್ ಕಾಲಘಟ್ಟದಲ್ಲಿ, ಹಝ್ರತ್ ಹುಧೈಫ(ರ) ಯಾರ ಜನಾಝ ನಮಾಝ್ ನಿರ್ವಹಿಸಲು ತಯಾರಾಗುತ್ತಿದ್ದರೋ ಕೇವಲ ಅವರ ಜನಾಝ ನಮಾಝನ್ನು ಮಾತ್ರ ನಿರ್ವಹಿಸುತ್ತಿದ್ದರು. ಉಳಿದವರದ್ದು ನಿರ್ವಹಿಸುತ್ತಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳನ್ನು ಬಾಹ್ಯವಾಗಿಯೂ ಈಡೇರಿಸಲಿಕ್ಕಾಗಿ ಹಝ್ರತ್ ಉಮರ್(ರ) ಇರಾನಿನ ಅರಸನ ಬಳೆಗಳನ್ನು ಒಬ್ಬ ಸಹಾಬಿಯ ಕೈಗಳಿಗೆ ತೊಡಿಸಿದರು.

ಹಝ್ರತ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಃ ಸಾಹಿಬ್‌ರು ಒಂದು ಹದೀಸನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ: ಹಝ್ರತ್ ಉಮರ್(ರ)ರ ಮೂಲಕ ಮುಸ್ಲಿಮರಿಗೆ ಲಭಿಸಿದ ಲೌಕಿಕ ವಿಜಯಗಳು ಮತ್ತು ಶ್ರೇಷ್ಠತೆಗಳು, ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವದ ಜ್ಞಾನದಿಂದ ಹಝ್ರತ್ ಉಮರ್(ರ)ರಿಗೆ ಬಾಕಿಯುಳಿದು ಲಭಿಸಿದ ಜ್ಞಾನದ ಭಾಗಗಳಾಗಿವೆ.

ಹಝ್ರತ್ ಮಾಲಿಕ್ ಬಿನ್ ಅಗ್‌ವಾಲ್ ವರದಿ ಮಾಡುತ್ತಾರೆ – ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ಲೆಕ್ಕ ತೆಗೆಯಲ್ಪಡುವುದಕ್ಕೆ ಮುಂಚಿತವಾಗಿ ನಿಮ್ಮ ಪರಿಶೋಧನೆ ಸ್ವತಃ ಮಾಡಿರಿ. ನಿಮ್ಮನ್ನು ಅಲ್ಲಾಹನು ಪರಿಶೀಲಿಸುವುದಕ್ಕೆ ಮುಂಚಿತವಾಗಿ ನಿಮ್ಮ ಆತ್ಮಾವಲೋಕನ ಮಾಡಿರಿ ಮತ್ತು ಪರಿಶೀಲಿಸಿರಿ. ಅಲ್ಲಾಹನ ಮುಂದೆ ಹಾಜರಾಗಲಿಕ್ಕಾಗಿ ಅತ್ಯಂತ ಹೆಚ್ಚಿನ ತಯಾರಿ ಮಾಡಿರಿ.

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರನ್ನು ಅವರು ಅಮೀರುಲ್ ಮುಅ್‌ಮಿನೀನ್ ಆದಾಗ, ಎಂದರೆ ಖಲೀಫರಾಗಿದ್ದಾಗ ನಾನು ನೋಡಿದೆನು. ಆಗ ಅವರ ನಿಲುವಂಗಿಯ ಎರಡು ತೋಳುಗಳ ಭಾಗದಲ್ಲಿ ಚರ್ಮದ ನಾಲ್ಕು ಹೊಲಿಗೆಗಳು ಇರುವುದನ್ನು ನಾನು ಕಂಡೆನು.

ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

(ಖುತ್‌ಬದ ಕೊನೆಯಲ್ಲಿ ಹುಝೂರ್ ಇತ್ತೀಚೆಗೆ ನಿಧನರಾದ ರಬ್ವದ ಫಝ್ಲೇ ಉಮರ್ ಆಸ್ಪತ್ರೆಯ ಸನ್ಮಾನ್ಯ ಡಾಕ್ಟರ್ ತಾಸೀರ್ ಮುಜ್‌ತಬಾ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು. ಅವರು ಮಾಡಿದ ಜಮಾಅತಿನ ಸೇವೆಗಳ ಬಗ್ಗೆಯೂ ಪ್ರಸ್ತಾಪಿಸಿದರು. ಜುಮಾ ನಮಾಝ್ ನಂತರ ಅವರ ಜನಾಝ ಗ಼ಾಇಬ್ ನಮಾಝ್ ನಿರ್ವಹಿಸುವುದಾಗಿಯೂ ಘೋಷಿಸಿದರು.)

—————*****—————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 29-10-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon